**ದಿ: 14-02-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಬಿ ಎಸ್ ಡಿ ವಕೀಲರಿಂದ:**

**1.** ನಾನು ಒಕ್ಕಲುತನ ಮಾಡುತ್ತೇನೆ. ನನಗೆ **56** ವರ್ಷ ವಯಸ್ಸಾಗಿದೆ. ನನ್ನ ಹೊಲ ಜುಟಮರಡಿ ಸೀಮಾಂತರದಲ್ಲಿದೆ ಅದರ ಸರ್ವೆ ನಂಬರ್ **34** ಆಗಿರುತ್ತದೆ. ನನ್ನ ಹೊಲದ ಆಜು ಬಾಜುಗೆ ದಾವಾ ಆಸ್ತಿ ಹತ್ತಿಕೊಂಡು ಇರುವುದಿಲ್ಲ. ಈ ದಾವೆಯನ್ನು ವಾದಿ ಬಸವರಾಜ ಇವರು ಪ್ರತಿವಾದಿ **1** ರಿಂದ **6** ಇವರ ಮೇಲೆ ಹೊಲದಲ್ಲಿ ಟಿ ಸಿ ತೆಗೆದುಕೊಂಡು ಹೋಗಬಾರದೆಂದು ಸಲ್ಲಿಸಿದ್ದಾರೆ. ಹೊಲದಲ್ಲಿರುವ ಟಿ ಸಿ ವಾದಿ ಬಸವರಾಜನ ಹೆಸರಿನಲ್ಲಿದೆ, ವಾದಿ ಹೆಸರಿನಲ್ಲಿರುವ ಟಿ ಸಿ ಇರುವ ದಾಖಲಾತಿಯನ್ನ ಉ ನಾನು ನೋಡಿರುವುದಿಲ್ಲ. ಟಿ ಸಿಯ ಆರ್ ಆರ್ ನಂಬರ್ ಏನಿದೆ ಎಂದು ನನಗೆ ಗೊತ್ತಿಲ್ಲ. ಯಾವ ವರ್ಷದಲ್ಲಿ ಟಿ ಸಿ ಹೊಲದಲ್ಲಿ ಕೂಡಿಸಿದ್ದಾರೆ ಎಂದು ದಾಖಲಾತಿಯನ್ನು ನಾನು ನೋಡಿದ್ದೀರಾ ಎಂದರೆ ನೋಡಿಲ್ಲ ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಇಂಗ್ಲೀಷ್ ಭಾಷೆಯಲ್ಲಿ ಬರೆದಿದ್ದಾರೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೇನು ಬರೆಸಿ ಹಾಕಿದ್ದೀರಿ ಎಂದು ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ವಾದಿಯ ಹೊಲದಲ್ಲಿ ಟಿ ಸಿ ಕೂರಿಸಿದರು ಅದನ್ನು ಪ್ರತಿವಾದಿಯರು ತೆಗೆದುಕೊಂಡು ಹೋಗಿದ್ದರು ಮತ್ತು ಹೊಲದಲ್ಲಿ ಕಿರುಕುಳ ಕೊಡುತ್ತಿದ್ದಾರೆಂದು ಬರೆಸಿದ್ದೇನೆ. ಪ್ರತಿವಾದಿಯರು ಟಿ ಸಿಯನ್ನು ತೆಗೆದುಕೊಂಡು ಹೋಗುವುದನ್ನು ನಾನು ನೋಡಿರುವುದಿಲ್ಲ.

**2.** ನನ್ನ ಹೊಲವು ನೀರಾವರಿ ಜಮೀನು ಆಗಿದ್ದು ಭೋರವೆಲ್ ಮುಖಾಂತರ ನೀರಾವರಿ ಇದೆ. ಭೋರವೆಲ್ ಹಾಕಿಸಿದ ನಂತರ ಕೆ ಇ ಬಿ ಇಲಾಖೆಯಿಂದ ವಿದ್ಯುತ್ ಸಂಪರ್ಕ ಪಡೆಯಲು ಅನುಮತಿಯನ್ನು ಪಡೆಯಬೇಕೆಂದರೆ ಸರಿ. ಅರ್ಜಿ ಕೊಟ್ಟ ಮೇಲೆ ಕೆ ಇ ಬಿ ಇಲಾಖೆಯವರು ಟಿ ಸಿಗೆ ಒಂದು ಆರ್ ಆರ್ ನಂಬರ್ ಸರ್ಟಿಫಿಕೇಟ್ ಕೊಡುತ್ತಾರೆಂದರೆ ಸರಿ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ವಾದಿಗೆ ಯಾವ ದಿನಾಂಕದಂದು ಅರ್ಜಿ ಕೊಟ್ಟಿದ್ದರು ಮತ್ತು ಅನುಮತಿ ಕೊಟ್ಟಿದ್ದರು ಎಂದು ಹೇಳಿ ಬರೆಸಿದ್ದೀರಾ ಎಂದರೆ ಬರೆಸಿಲ್ಲ ಎನ್ನುತ್ತಾರೆ. ದಾವಾ ಹೊಲದಲ್ಲಿ ತೊಗರಿ ಬೆಳೆ ಬೆಳೆಯುತ್ತಾರೆಂದು

ಹೇಳಿ ಬರೆಸಿದ್ದೇನೆ**.** ತೊಗರಿ ಬೆಳೆ ಒಣ ಬೇಸಾಯ ಭೂಮಿಯಲ್ಲಿ ಬೆಳಯುತ್ತಾರೆ ಎಂದೆರೆ ಸಾಕ್ಷಿಯು ಒಣ ಬೇಸಾಯ ಮತ್ತು ನೀರಾವರಿ ಜಮೀನು ಎರಡರಲ್ಲಿ ಬೆಳೆಯುತ್ತಾರೆ ಎನ್ನುತ್ತಾರೆ**.**

**3.** ದಾವಾ ಜಮೀನಿನ ಸರ್ವೆ ನಂಬರ್ **72 /1 , 01** ಎಕರೆ **31** ಗುಂಟೆ ವಿಸ್ತೀರ್ಣ ಇದೆ**,** ದಾವಾ ಜಮೀನು ವಾದಿ ಬಸವರಾಜನ ಹೆಸರಿನಲ್ಲಿದೆ**.** ಅದಕ್ಕೂ ಪೂರ್ವದಲ್ಲಿ ಸದರಿ ಜಮೀನು ಬಸವರಾಜನ ತಂದೆಯ ಹೆಸರಿನಲ್ಲಿತ್ತು**.** ವಾದಿ ಬಸವರಾಜನ ತಂದೆಯ ಹೆಸರಿನಲ್ಲಿ ಎಷ್ಟು ಸರ್ವೆ ನಂಬರನಲ್ಲಿ ಎಷ್ಟು ಜಮೀನುಗಳು ಇದ್ದವು ಎಂದು ನನಗೆ ಗೊತ್ತಿಲ್ಲ ವಾದಿಯ ತಂದೆ ಭಾಗ ಆದ ಮೇಲೆ ವಾದಿಯ ಹೆಸರಿಗೆ ಆಗಿರುತ್ತದೆ ಎನ್ನುತ್ತಾರೆ**.** ವಾದಿಯ ತಂದೆಯ ಹೆಸರು ಯಂಕೋಬ ಆಗಿದ್ದು ಅವರು **15** ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ**.** ವಾದಿಯ ತಂದೆ ಯಂಕೋಬನ ಅಣ್ಣ ತಮ್ಮಂದಿರ ಹೆಸರು ಹನುಮಗೌಡ ಮತ್ತು ಬಸನಗೌಡ**. 1** ಮತ್ತು **4**ನೇ ಪ್ರತಿವಾದಿಯರು ಜೀವಂತವಾಗಿದ್ದಾರೆ**.** ವಾದಿಯ ತಂದೆ ಯಂಕೋಬ ತೀರಿಕೊಂಡ ಮೇಲೆ ಭಾಗ ಮಾಡಿಕೊಂಡಿರುತ್ತಾರೆ**.** ವಾದಿಯ ತಂದೆ ತೀರಿಕೊಂಡು **1** ವರ್ಷದ ನಂತರ ಭಾಗ ಮಾಡಿಕೊಂಡಿರುತ್ತಾರೆ**.** ಭಾಗ ಆದ ಮೇಲೆ ಯಾರು ಯಾರಿಗೆ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ಎಷ್ಟು ಜಮೀನು ಬಂದಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ**.** ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ಚಕ್‌ಬಂದಿಯನ್ನು ನೀವು ಬರೆಸಿಲ್ಲ ಎಂದರೆ ಸರಿ**.** ಪ್ರತಿವಾದಿಯರು ಕಿರುಕುಳ ಕೊಡುತ್ತಿದ್ದಾರೆ ಎಂದು ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿಯು ಊರಿನಲ್ಲಿಯೇ ಬಗೆಹರಿಸಿಕೊಳ್ಳೋಣ ಎಂದು ಹೇಳಿರುತ್ತಾರೆ ಎನ್ನುತ್ತಾರೆ**.** ಟಿ ಸಿ ಕಳ್ಳತನ ಆಗಿದೆ ಎಂದು ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿದ್ದಾರೆ**.** ಪೋಲಿಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಾಗಿರುವುದನ್ನು ನಾನು ನೋಡಿರುವುದಿಲ್ಲ**.**

**4.** ಸರ್ವೆ ನಂಬರ್ **72** ರಲ್ಲಿ ಯಾರ ಯಾರ ಹೊಲಗಳು ಎಷ್ಟು ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿಯು ವಾದಿ ಬಂದು ಅವರಿಗೆ **01** ಎಕರೆ **31** ಗುಂಟೆ ಬಂದಿದೆ ಎಂದು ಹೇಳಿದರು ಉಳಿದವರ ಬಗ್ಗೆ

ನನಗೆ ಗೊತ್ತಿಲ್ಲ**,** ಅದರ ಪ್ರಕಾರ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ**.** ದಾವಾ ಆಸ್ತಿ ಸ ನಂ **72*/1** ಒಟ್ಟು ವಿಸ್ತೀರ್ಣ **02** ಎಕರೆ **27** ಗುಂಟೆ ಇದ್ದು ಅದರಲ್ಲಿ ವಾದಿಕಗೆ **01** ಎಕರೆ **31** ಗುಂಟೆ**,** ಪ್ರತಿವಾದಿ ನಂಬರ್ **5** ಇವರಿಎಗೆ **36** ಗುಂಟೆ ಮುಟೇಶನ್ ಆಗಿದೆ ಎಂದರೆ ಸಾಕ್ಷಿಯು ವಾದಿಯ ಜಮೀನು ಅಷ್ಟೇ ನನಗೆ ಗೊತ್ತು ಎನ್ನುತ್ತಾರೆ**.** ಆಸ್ತಿ ಸ ನಂ **72*/2** ಒಟ್ಟು ವಿಸ್ತೀರ್ಣ **02** ಎಕರೆ **27** ಗುಂಟೆ ಇದ್ದು ಅದರಲ್ಲಿ **2**ನೇ ಪ್ರತಿವಾದಿ ಹೆಸರಿಗೆ **01** ಎಕರೆ **31** ಗುಂಟೆ**,** ಪ್ರತಿವಾದಿ ನಂಬರ್ **5** ಇವರಿಎಗೆ **36** ಗುಂಟೆ ಮುಟೇಶನ್ ಆಗಿದೆ ಎಂದರೆ ಸಾಕ್ಷಿಯು ವಾದಿಯ ಜಮೀನು ಅಷ್ಟೇ ನನಗೆ ಗೊತ್ತು ಎನ್ನುತ್ತಾರೆ**.** ಸ ನಂ **83** ಎಷ್ಟು ವಿಸ್ತೀರ್ಣ ಮತ್ತು ಯಾರ ಹೆಸರಿನಲ್ಲಿದೆ ನನಗೆ ಗೊತ್ತಿಲ್ಲ**.** ಸ ನಂ **83** ರಲ್ಲಿ **06-00** ಎಕರೆ ಜಮೀನು ಇದ್ದು ಮೊದಲು ಹನುಮಂತ್ರಾಯ ಹೆಸರಿನಲ್ಲಿದ್ದು ನಂತರ ವಾದಿಯ ಸಹೋದರ ಬಾಲಗೌಡ ನ ಹೆಸರಿಗೆ **2-00** ಎಕರೆ ಮತ್ತು **2** ಮತ್ತು **5**ನೇ ಪ್ರತಿವಾದಿ ಹೆಸರಿಗೆ ತಲಾ **2-00** ಎಕರೆಯಂತೆ ಮುಟೇಶನ್ ಆಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ**.**

**5.** ಸ ನಂ **83** ಮತ್ತು **72** ಹೊಲಗಳನ್ನು ನಾನು ನೋಡಿದ್ದೇನೆ**.** ಸ ನಂ **72** ರಲ್ಲಿ ಪ್ರತಿವಾದಿ **2** ಮತ್ತು **5** ರ ವರ ಹೊಲದಲ್ಲಿ ಈಗ ಸಜ್ಜೆ ಬೆಳೆ ಬೆಳೆದಿರುತ್ತಾರೆ**.** ಈಗ ಅವರ ಜಮೀನು ಒಣ ಭೂಮಿಯಾಗಿರುತ್ತದೆ**.** ಸ ನಂ **83** ರಲ್ಲಿ ಏನೂ ಬೆಳೆದಿದ್ದಾರೆ ಎಂದರೆ ಸಾಕ್ಷಿಯು ಅದು ಒಣ ಭೂಮಿಯಾಗಿರುತ್ತದೆ ಎನ್ನುತ್ತಾರೆ**.** ಸ ನಂ **83** ರಲ್ಲಿ **2**ನೇ ಪ್ರತಿವಾದಿ ಹೆಸರಿಗೆ ಎಸ್ ಸಿ ಎಸ್ ಟಿ ಕಾರ್ಪೋರೇಷನ್ ನಿಂದ **2015** ರಲ್ಲಿ ಒಂದು ಬೋರವೆಲ್ ಮಂಜೂರಾತಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ**.** ಆ ಬೋರವೆಲ್ ನವರು ಕೆ ಬಿ ಜೆ ಎನ್ ಎಲ್ ಇಲಾಖೆಯವರು ಹಾಕಿಕೊಟ್ಟಿದ್ದರು ಎಂದರೆ ಸರಿ**.** ಸ ನಂ **72** ರಲ್ಲೂ **2**ನೇ ಪ್ರತಿವಾದಿ ಭೋರವೆಲ್ ಹಾಕಿಸಿಕೊಂಡಿದ್ದ ಎಂದರೆ ಸರಿ**.** ಸ ನಂ **72** ರಲ್ಲಿನ ಬೋರವೆಲ್ ನಿಂದ **2** ಮತ್ತು **5**ನೇ ಪ್ರತಿವಾದಿಯರು ನೀರಾವರಿ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು **2** ಕಡೆ ಇದೆ ಎನ್ನುತ್ತಾರೆ**.** ಸ ನಂ **83** ರಲ್ಲಿ ನೀರು ಕಡಿಮೆಯಾಗಿರುವುದರಿಂದ ಅಲ್ಲಿಂದ ಟಿ ಸಿ ತೆಗೆದು ಸ ನಂ **72** ಕ್ಕೆ **2** ಮತ್ತು **5** ನೇ ಪ್ರತಿವಾದಿ ಹಾಕಿಸಿಕೊಂಡು ನೀರಾವರಿ

ಮಾಡಿ ಕೊಂಡಿದ್ದಾರೆಂದರೆ ಸರಿಯಲ್ಲ. ಸ ನಂ **72** ಕ್ಕೆ ಹೊಂದಿಕೊಂಡು ನಿಮ್ಮ ಹೊಲಗಳು ಇಲ್ಲ ಎಂದರೆ ಸಾಕ್ಷಿಯು **2-3** ಹೊಲ ಬಿಟ್ಟು ನನ್ನ ಹೊಲ ಇದೆ ಎನ್ನುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಹೊಲ ನೀವು ನೋಡಿಲ್ಲ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿ ಹೆಸರಿನಲ್ಲಿ ಸ ನಂ **72** ರಲ್ಲಿ ಯಾವುದೇ ಟಿ ಸಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಹೊಲದ ಬಗ್ಗೆ ನಿಮಗೆ ಏನೂ ಮಾಹಿತಿ ಇಲ್ಲ ಆದರೂ ವಾದಿ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ಟಿ ಸಿ ಯನ್ನು ತೆಗೆದುಕೊಂಡು ಹೋಗಿಲ್ಲ ಮತ್ತು ಕಿರುಕುಳ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನಿನಲ್ಲಿರುವ ಭೋರವೆಲ್ ನಿಂದ ವಾದಿಯು ಹೊಲಕ್ಕೆ ನೀರು ಕೊಡಬೇಕೆಂದು ಕೇಳಿದ್ದರಿಂದ ಅವರು ಕೊಡುವುದಿಲ್ಲ ಎಂದು ಹೇಳಿದ್ದರಿಂದ ಸುಳ್ಳು ದಾವೆ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿಯರು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ